
ಇಂಗ್ಲಿಷ್ ಮೂಲ: ಒ'ಹೆನ್ರಿ
ಕನ್ನಡಕ್ಕೆ: ಜೆ.ವಿ. ಕಾರ್ಲೊ

ಕಲೆ: ಮಂಜುನಾಥ ವಿ.ಎಂ.

# ಒಂದು ಚಳಿಗಾಲದ ರಾತ್ರಿ...



ನ್ಯೂಯಾರ್ಕಿನ ಮ್ಯಾಡಿಸನ್ ಚೌಕದ ಒಂದು ಬೆಂಚಿನ ಮೇಲೆ ಮಲಗಿದ್ದ ಸೋಫಿಯ ಮೇಲೆ ಒಂದು ಹಣ್ಣೆಲೆ ಗಾಳಿಗೆ ತೇಲುತ್ತಾ ಬಂದು ಬಿದ್ದಾಗ ಶರತ್ಕಾಲ ಮುಗಿದು ಚಳಿಗಾಲ ಆರಂಭವಾಗುತ್ತಿರುವುದು ಅವನ ಅರಿವಿಗೆ ಬಂದಿತು. ಮೂಳೆ ಮೂಳೆಗಳಿಗೂ ಸೂಜಿಗಳಿಂದ ಚುಚ್ಚುವಂತೆ ಶರುವಾಗಲಿರುವ ಚಳಿಯಿಂದ ಹೇಗೆ ರಕ್ಷಣೆ ಪಡೆಯುವುದೆಂದು ಯೋಚಿಸಿ ಅವನು ಕಂಗಾಲಾದ. ಉತ್ತರದ ಕಡೆಯಿಂದ ರೊಂಯ್ಯನೇ ಬೀಸಿಬರುವ ಕುಳಿರ್ಗಾಳಿಯ ಜೊತೆಗೆ ನೀಲಿ ಸಮವಸ್ತ್ರ ಧರಿಸಿದ್ದ ಪೊಲೀಸರಿಂದ ಬಚಾವಾಗಲು ಯಾವನಾದರೂ ಪುಣ್ಯಾತ್ಮ ಮೂರು ತಿಂಗಳು ಉಂಡು ಮಲಗುವ ವ್ಯವಸ್ಥೆ ಮಾಡಿಕೊಡುವಂತಿದ್ದರೆ? ಎಂಬ ಕಾಲ್ಪನಿಕ ಚಿತ್ರವನ್ನು ಬಿಡಿಸಿಕೊಳ್ಳುತ್ತಾ ಅವನು ಮತ್ತಷ್ಟು ಮುದುಡಿಕೊಂಡ.

ಮೂರು ಭಾನುವಾರಗಳ ಸಾಪ್ತಾಹಿಕ ಪುರವಣಿಗಳಿಂದ ಅವನು ತನ್ನನ್ನು ಸುತ್ತಿಕೊಂಡಿದ್ದ. ವಿಶೇಷವಾಗಿ ಕಾಲುಗಳು, ಹಿಮ್ಮಡಿ, ಮತ್ತು ಎದೆಯನ್ನು ಬೆಚ್ಚಗಾಗಿಸುವಂತೆ ಪತ್ರಿಕೆಗಳನ್ನು ಹೊದ್ದುಕೊಂಡಿದ್ದ. ಆದರೂ ನಡುಗುತ್ತಿದ್ದ.

ಎದ್ದು ಪತ್ರಿಕೆಗಳನ್ನೆಲ್ಲಾ ಜೋಡಿಸಿಕೊಂಡು ಬ್ಲ್ಯಾಕ್‌ವೆಲ್ ಕಡೆಗೆ ಹೆಜ್ಜೆ ಹಾಕತೊಡಗಿದ. ಯಾರ ಮುಂದೆಯೂ ಕೈಯೊಡ್ಡಿ ಭಿಕ್ಷೆ ಬೇಡಲು ಅವನ ಸ್ವಾಭಿಮಾನ ಅಡ್ಡಿಯಾಗಿತ್ತು. ನಿರ್ಗತಿಕರ ಕೇಂದ್ರದ ಮೃಷ್ಟಾನ್ನಕ್ಕಿಂತ ಜೈಲಿನ ಕೂಳೇ ಶ್ರೇಷ್ಠವೆಂದು ನಂಬಿದ್ದ. ಹಾಗೆಯೇ ಮಾವನ ಮನೆಯ